# ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರಮ–30.6.2023**

## ನಿವೃತ್ತಿ ಎನ್ನುವುದು ಸಹಜ ಪ್ರಕ್ರಿಯೆ : ಡಾ.ಎ. ಸುಬ್ಬಣ್ಣ ರೈ

ಯಾವುದೇ ಸಂಸ್ಥೆ ಹಾಗೂ ಇಲಾಖೆಯ ಕಾರ್ಯಚಟುವಟಿಕೆಗಳು ಸಕ್ರಿಯವಾಗಿ ನಡೆಯಬೇಕಾದರೆ ಎಲ್ಲರ ಸಹಕಾರ ಅಗತ್ಯವೆಂದು ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಸಚಿವರಾದ **ಡಾ. ಎ. ಸುಬ್ಬಣ್ಣ ರೈ ಅವರು** ಅಭಿಪ್ರಾಯಪಟ್ಟರು.




ಮಾನ್ಯ ಕುಲಸಚಿವರಾದ **ಡಾ. ಎ. ಸುಬ್ಬಣ್ಣ ರೈ ಅವರು** ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕನ್ನಡ ವಿಶ್ವವಿದ್ಯಾಲಯದ ಭುವನ ವಿಜಯ ಸಭಾಂಗಣದಲ್ಲಿ **ಶ್ರೀ ವಸಂತ ಬಡಿಗೇರ** ಹಾಗೂ ತಾತ್ಕಾಲಿಕ ನೌಕರರಾದ **ಶ್ರೀಮತಿ ನಾಗಮ್ಮ** ಅವರ **ಬೀಳ್ಕೊಡುಗೆ ಸಮಾರಂಭದ** ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಗ್ರೂಪ್ ಡಿ ನೌಕರರರಿಂದ ಕುಲಪತಿಗಳವರೆಗೂ ವಿಶ್ವವಿದ್ಯಾಲಯದ ಅಭಿವೃದ್ಧಿಯಲ್ಲಿ ಎಲ್ಲಾ ನೌಕರರ ಪಾತ್ರ ಪ್ರಮುಖವಾದದ್ದು. ಈ ನಿಟ್ಟಿನಲ್ಲಿ ನೌಕರರು ವೃತ್ತಿ ಮತ್ತು ನಿವೃತ್ತಿ ಜೀವನದಲ್ಲಿ ಎರಡು ಸಮಾನವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇನ್ನೂ ನಮ್ಮ ಅಧೀನ ನೌಕರರು ನಿವೃತ್ತಿ ಹೊಂದುತ್ತಿರುವುದು ಬೇಸರದ ಸಂಗತಿ ಎಂದು ನುಡಿದರು.

ಈ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಕನ್ನಡ ವಿಶ್ವವಿದ್ಯಾಲಯದ ಉಪಕುಲಸಚಿವರಾದ **ಡಾ. ಎ. ವೆಂಕಟೇಶ ಅವರು** ಪ್ರಾಸ್ತಾವಿಕವಾಗಿ ಮಾತನಾಡಿದರು, ಸಹಾಯಕ ಕುಲಸಚಿವರಾದ **ಗುರುಬಸಪ್ಪ ಅವರು** ಗಣ್ಯರನ್ನು ಸ್ವಾಗತಿಸಿದರು, ಇಂಗ್ಲಿಷ್ ಅಧ್ಯಾಪಕರಾದ **ಜ್ಯೋತಿ ಎಂ ಅವರು** ಕಾರ್ಯಕ್ರಮವನ್ನು ನಿರೂಪಿಸಿದರು, ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಪ್ರಾಧ್ಯಾಪಕರು ಬೋಧಕ–ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಭಾನುವಾರ,2 ಜುಲೈ 2023,
ಗಂಗಾವತಿ

ವಿಜಯ ಕರ್ನಾಟಕ VK

# ವಿವಿ ನೌಕರರ ನಿವೃತ್ತಿ ಬೀಳ್ಕೊಡುಗೆ ಸಮಾರಂಭ

**ವಿಕ ಸುದ್ದಿಲೋಕ** ವಿಜಯನಗರ (ಹೊಸಪೇಟೆ)

ಯಾವುದೇ ಸಂಸ್ಥೆ ಹಾಗೂ ಇಲಾಖೆಯ ಕಾರ್ಯಚಟುವಟಿಕೆಗಳು ಸಕ್ರಿಯವಾಗಿ ನಡೆಯಬೇಕಾದರೆ ಎಲ್ಲರ ಸಹಕಾರ ಅಗತ್ಯ ಎಂದು ಕನ್ನಡ ವಿವಿಯ ಕುಲಸಚಿವ ಡಾ.ಎ.ಸುಬ್ಬಣ್ಣ ರೈ ಹೇಳಿದರು.

ಕನ್ನಡ ವಿವಿಯ ಭುವನ ವಿಜಯ ಸಭಾಂಗಣದಲ್ಲಿ ನೌಕರರಾದ ವಸಂತ ಬಡಿಗೇರ ಹಾಗೂ ನಾಗಮ್ಮ ಅವರ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗ್ರೂಪ್ ಡಿ ನೌಕರರರಿಂದ ಕುಲಪತಿಗಳವರೆಗೂ ವಿವಿಯ ಅಭಿವೃದ್ಧಿಯಲ್ಲಿ ಎಲ್ಲಾ ನೌಕರರ ಪಾತ್ರ ಪ್ರಮುಖವಾದದ್ದು. ಈ ನಿಟ್ಟಿನಲ್ಲಿ ನೌಕರರು ವೃತ್ತಿ ಮತ್ತು ನಿವೃತ್ತಿ ಜೀವನದಲ್ಲಿ ಎರಡು ಸಮಾನವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇನ್ನೂ ನಮ್ಮ ಅಧೀನ ನೌಕರರು ನಿವೃತ್ತಿ ಹೊಂದುತ್ತಿರುವುದು ಬೇಸರದ ಸಂಗತಿ ಎಂದರು.

ಉಪಕುಲಸಚಿವ ಡಾ.ಎ.ವೆಂಕಟೇಶ ಪ್ರಾಸ್ತಾವಿಕವಾಗಿ ಮಾತನಾಡಿದರು, ಸಹಾಯಕ ಕುಲಸಚಿವ ಗುರುಬಸಪ್ಪ ಅಧ್ಯಾಪಕಿ ಎಂ.ಜ್ಯೋತಿ ಇದ್ದರು.




ಕನ್ನಡ ವಿವಿಯಲ್ಲಿ ನಿವೃತ್ತಿ ಹೊಂದಿದ್ದ ನೌಕರರಾದ ವಸಂತ ಬಡಿಗೇರ ಹಾಗೂ ನಾಗಮ್ಮ ಅವರ ಬೀಳ್ಕೊಡುಗೆ ಸಮಾರಂಭ ನಡೆಯಿತು.